

# ಕಥೆ ಮತ್ತು ಮಾದಕತೆ!

ಸಾಮಾನ್ಯ ವ್ಯಕ್ತಿ ಅಧಿಕಾರಕ್ಕೆ ಬಂದರೆ ಸಮಾಜದಲ್ಲಿ ಏನೆಲ್ಲ ಬದಲಾವಣೆಗಳಾಗುತ್ತವೆ? ಈ ಪ್ರಶ್ನೆಗೆ ಉತ್ತರ – 'ನಾನೇ ನೆಕ್ಸ್ಟ್ ಸಿಎಂ' ಎನ್ನುತ್ತಾರೆ ಮುಸ್ಸಂಜೆ ಮಹೇಶ್. ಅವರ ನಿರ್ದೇಶನದ ಈ ಸಿನಿಮಾದ ಟ್ರೈಲರ್ ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ.

'ನಾನೇ ನೆಕ್ಸ್ಟ್ ಸಿಎಂ' ಚಿತ್ರದ ಬಹುಮುಖ್ಯ ಅಥವಾ ಏಕೈಕ ಆಕರ್ಷಣೆ ರಾಗಿಣಿ. ನಿರ್ದೇಶಕರು ರಾಗಿಣಿಯವರ ವರ್ಚಸ್ಸು ಮತ್ತು ಗ್ಲಾಮರ್ ನೆಚ್ಚಿಕೊಂಡು ಸಿನಿಮಾ ರೂಪಿಸಿದ್ದಾರೆ. ನಾಯಕಿ ಕೇಂದ್ರಿತ ಸಿನಿಮಾಗಳು ಅಪರೂಪವಾಗುತ್ತಿರುವ ಸಿನಿಮಾಗಳಲ್ಲಿ ರಾಗಿಣಿ ಅವರು ಕೇಂದ್ರದಲ್ಲಿರುವ ಚಿತ್ರವೊಂದನ್ನು ಮಹೇಶ್ ನಿರ್ದೇಶಿಸಿದ್ದಾರೆ. ಕಳೆದ ವರ್ಷದ ಆಗಸ್ಟ್‌ನಲ್ಲೇ ಸೆಟ್ಟೇರಿದ ಈ ಸಿನಿಮಾ, ಕೊಂಚ ತಡವಾಗಿಯೇ ತೆರೆಗೆ ಸಿದ್ಧವಾಗಿದೆ. 'ಚಿತ್ರದ ಗುಣಮಟ್ಟ ಹೆಚ್ಚಲು ಇಷ್ಟು ಅವಧಿ ಅಗತ್ಯವಾಗಿತ್ತು' ಎನ್ನುವುದು ನಿರ್ದೇಶಕರ ಅನಿಸಿಕೆ.

ಹಿಂದಿನ ಚಿತ್ರಗಳಂತೆ ಈ ಚಿತ್ರದಲ್ಲೂ ರಾಗಿಣಿ ಬಿಡುಬೀಸಾಗಿ ಕಾಣಿಸಿಕೊಂಡಿದ್ದಾರಂತೆ. 'ತುಪ್ಪ ಬೇಕಾ ತುಪ್ಪಾ' ಹಾಡಿನಂತಹ ಮಾದಕ 'ಐಟಂ' ಇಲ್ಲೂ ಇದೆ. ಕುಣಿಯಲಿಕ್ಕಾಗಿಯೇ ತೂಕ ಇಳಿಸಿಕೊಳ್ಳುವ ಮೂಲಕ ಚಿತ್ರದ ತೂಕವನ್ನು ರಾಗಿಣಿ ಹೆಚ್ಚಿಸಿದ್ದಾರಂತೆ. ಮಾದಕತೆ ಮಾತ್ರವಲ್ಲ, ಸಾಹಸ ದೃಶ್ಯಗಳಲ್ಲೂ ಅವರು ರೋಚಕವಾಗಿ ಕಾಣಿಸಿಕೊಂಡಿದ್ದಾರಂತೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶಿಸಿರುವ ಈ ಚಿತ್ರದಲ್ಲಿ ಶ್ರೀನಿವಾಸಮೂರ್ತಿ, ದೇವರಾಜ್, ಪದ್ಮಾ ವಾಸಂತಿ ಅವರಂತಹ ಹಿರಿಯ ಕಲಾವಿದರು ನಟಿಸಿದ್ದಾರೆ.




# ಸಾಯಿಪ್ರಕಾಶ್‌ರ ಪೊಲೀಸ್ ಸ್ಟೋರಿ

ಸಾಯಿಪ್ರಕಾಶ್ ನಿರ್ದೇಶನದ 98ನೇ ಸಿನಿಮಾ ಸೆನ್ಸಾರ್ ಪ್ರಕ್ರಿಯೆ ಮುಗಿಸಿಕೊಂಡು ತೆರೆಗೆ ಸಿದ್ಧವಾಗಿದೆ. ಭಾವನಾತ್ಮಕ ಚಿತ್ರಗಳಿಗೆ ಸಾಯಿಪ್ರಕಾಶ್ ಎತ್ತಿದ ಕೈ. ಆದರೆ, ಈ ಬಾರಿ ಅವರು ಪೊಲೀಸ್ ಸ್ಟೋರಿ ನಿರೂಪಿಸಿದ್ದಾರೆ. ಚಿತ್ರದ ಹೆಸರು 'ರಿಯಲ್ ಪೊಲೀಸ್'.

ಪೊಲೀಸ್ ಯೂನಿಫಾರ್ಮ್‌ಗೆ ಹೇಳಿಮಾಡಿಸಿದಂತಿರುವ ಸಾಯಿಕುಮಾರ್ ಚಿತ್ರದ ನಾಯಕ. ಅವರು ಪೊಲೀಸ್ ಪೋಷಾಕು ತೊಟ್ಟ ಸಿನಿಮಾ ಸೋಲುವುದಿಲ್ಲ ಎನ್ನುವ ಮಾತಿದೆ. ಅದಕ್ಕೆ ತಕ್ಕಹಾಗೆ, ಸಾಯಿಪ್ರಕಾಶ್ ಪೊಲೀಸ್ ಅಧಿಕಾರಿಯಾಗಿ ನಟಿಸಿದ 50ಕ್ಕೂ ಹೆಚ್ಚು ಚಿತ್ರಗಳಲ್ಲಿ ಬಹುತೇಕ ಚಿತ್ರಗಳು ಗೆಲುವು ಕಂಡಿವೆ. ಹಾಗಾಗಿ, 'ರಿಯಲ್ ಪೊಲೀಸ್' ಕೂಡ ಗೆಲ್ಲುವ ಬಗ್ಗೆ ನಿರ್ದೇಶಕರಿಗೆ ಅಪರಿಮಿತ ವಿಶ್ವಾಸ.

ದಿಶಾ ಪೂವಯ್ಯ ಚಿತ್ರದ ನಾಯಕಿ. ಗಣೇಶ ರಾವ್ ಹಾಗೂ ಮಂಜುನಾಥ ಹೆಗಡೆ ತಾರಾಗಣದಲ್ಲಿರುವ ಪ್ರಮುಖರು. ಸಾಯಿಪ್ರಕಾಶ್‌ರ ಪುತ್ರ ಸಾಯಿಕೃಷ್ಣ ಕೂಡ ಪುಟ್ಟ ಪಾತ್ರವೊಂದರಲ್ಲಿ ನಟಿಸಿದ್ದಾರೆ. ಚಿತ್ರದಲ್ಲಿ ಅವರದು ಮುಸ್ಲಿಂ ಉಗ್ರನ ಪಾತ್ರ. ಮಗನಿಗೆ ನಟನೆಯ ಪಾಠ ಹೇಳುವ ಅವಕಾಶ ದೊರೆತದ್ದು ಅಪ್ಪನಿಗೆ ಖುಷಿಕೊಟ್ಟಿದೆ.

'ರಿಯಲ್ ಪೊಲೀಸ್' ಜಿಹಾದ್ ಕುರಿತು ಮಾತನಾಡುತ್ತದಂತೆ. ಸೂಕ್ಷ್ಮವಾದ ವಿಷಯವನ್ನು ಅದರ ಎಲ್ಲ ಆಯಾಮಗಳೊಂದಿಗೆ ಚರ್ಚಿಸಿದ್ದೇವೆ ಎನ್ನುವ ಸಾಯಿಪ್ರಕಾಶ್, ಚಿತ್ರಕಥೆಯಲ್ಲಿ ವರ್ತಮಾನದ ಹಲವು ನೈಜ ಘಟನೆಗಳನ್ನು ಬಳಸಿಕೊಂಡಿದ್ದಾರಂತೆ. ಈ ಸಿನಿಮಾ ಜನರಿಗೆ ಇಷ್ಟವಾಗಲಿದೆ ಹಾಗೂ ಅವರನ್ನು ಯೋಚನೆಗೆ ಹಚ್ಚಲಿದೆ ಎನ್ನುವ ವಿಶ್ವಾಸ ಅವರದು. ರಾಜ್ಯದ್ಯಾಂತ ಪೊಲೀಸ್ ಸಿಬ್ಬಂದಿಗಾಗಿ ತಮ್ಮ ಸಿನಿಮಾದ ವಿಶೇಷ ಪ್ರದರ್ಶನಗಳನ್ನು ಏರ್ಪಡಿಸುವ ಉದ್ದೇಶ ಅವರಿಗಿದೆ. ಬಲರಾಮ್‌ರ ಸಂಗೀತ ಹಾಗೂ ಜೆ.ಜೆ. ಕೃಷ್ಣರ ಛಾಯಾಗ್ರಹಣ ಚಿತ್ರಕ್ಕಿದೆ.